# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ ರವರ ನ್ಯಾಯಾಲಯ, ಯಳಂದೂರು.

**C.C No.** 367/2024

| | | |
|---|---|---|
| ಸಾಕ್ಷಿದಾರರ ಹೆಸರು: | ಸಣ್ಣಮ್ಮ | ಪ್ರಮಾಣ ಮಾಡಿದ ದಿನಾಂಕ 07.08.2025. |
| ಗಂಡನ ಹೆಸರು: | ಸಿದ್ದೂರಯ್ಯ | |
| ವಯಸ್ಸು: | 60 ವರ್ಷ | |
| ವೃತ್ತಿ: | ಗೃಹಿಣಿ | CW-1 |
| ವಾಸಸ್ಥಳ: | ಉಮ್ಮತ್ತೂರು | PW-1 |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ಸುಮಾರು ಒಂದೂವರೆ ವರ್ಷಗಳ ಹಿಂದೆ ಚಿಂಚನಹಳ್ಳಿ ದೇವಸ್ಥಾನಕ್ಕೆ ಹೋಗಿದ್ದೆ. ದೇವಸ್ಥಾನದಿಂದ ಉಮ್ಮತೂರಿಗೆ ಬರುತ್ತಿದ್ದ ಸಮಯದಲ್ಲಿ ಮಹದೇಶ್ವರದ ದೇವಸ್ಥಾನದ ಬೋರೆ ರಸ್ತೆಯ ಬಳಿ ಒಬ್ಬ ವ್ಯಕ್ತಿ ಸ್ಕೂಟರ್ ನಲ್ಲಿ ಬಂದು ನನಗೆ ಚಾಕು ತೋರಿಸಿ ನನ್ನ ಕತ್ತಿನಲ್ಲಿದ್ದ ಕರಿಮಣಿ ಸರವನ್ನು ಕಿತ್ತುಕೊಂಡು ಹೋಗಿರುತ್ತಾನೆ.

ಸದರಿ ಕರಿಮಣಿ ಸರದಲ್ಲಿ 15 ಚಿನ್ನದ ಪೀಸು, 2 ಚಿನ್ನದ ಕಾಸು ಮತ್ತು 1 ತಾಳಿ ಇತ್ತು. ಸದರಿ ಕರಿಮಣಿ ಸರವನ್ನು ಕಿತ್ತುಕೊಂಡ ನಂತರ ನನ್ನನ್ನು ಹಿಂದಕ್ಕೆ ತಳ್ಳಿ ಬೈಕಿನಲ್ಲಿ ಪರಾರಿಯಾಗಿರುತ್ತಾನೆ. ನಾನು ಕೆಳಗಡೆ ಬಿದ್ದ ನಂತರ ಅಕ್ಕಪಕ್ಕದ ಜನರು ನನ್ನನ್ನು ಸುಧಾರಿಸಿ ಮನೆಗೆ ಕರೆದುಕೊಂಡು ಹೋಗಿರುತ್ತಾರೆ.

2 ತಿಂಗಳ ನಂತರ ಚಿನ್ನ ಕದ್ದಿರುವವರನ್ನು ಕುದೇರು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ ಎಂದು ನನಗೆ ಮಾಹಿತಿ ತಿಳಿದ ಮೇರೆಗೆ ನಾನು ಪೊಲೀಸ್ ಠಾಣೆಗೆ ಹೋಗಿರುತ್ತೇನೆ. ನಾನು ಸದರಿ ಆರೋಪಿಯನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಆರೋಪಿಯನ್ನು ಡೆಸ್ಕ್ ಟಾಪ್ ಅಲ್ಲಿ ನೋಡಿ ಅವರೆ ಎಂದು ಗುರುತಿಸಿರುತ್ತಾರೆ.

ಪೊಲೀಸ್ ಠಾಣೆಯಲ್ಲಿ ಆರೋಪಿಯನ್ನು ನೋಡಿ ಗುರುತಿಸಿದ ನಂತರ ಪೊಲೀಸರು ಆರೋಪಿಯ ವಿರುದ್ಧ ಪ್ರಕರಣ ಮಾಡಬೇಕೆಂದು ಹೇಳಿರುತ್ತಾರೆ. ಪೊಲೀಸ್ ಠಾಣೆಯಲ್ಲಿ ನೋಡಿದ ವ್ಯಕ್ತಿಯೇ ನನಗೆ ಘಟನೆಯಾದ ನಂತರದಲ್ಲಿ ಚಾಕು ತೋರಿಸಿ ನನ್ನ ಕರಿಮಣಿ ಸರವನ್ನು ಕಿತ್ತುಕೊಂಡು ಹೋಗಿರುತ್ತಾನೆ.

ಪೊಲೀಸ್ ಠಾಣೆಯಲ್ಲಿ ದೂರು ನೀಡಿರುತ್ತೇನೆ. ಸಾಕ್ಷಿಗೆ ಸದರಿ ದೂರನ್ನು ತೋರಿಸಿದ್ದು ಸದರಿ ದೂರನ್ನು ಒಪ್ಪಿಕೊಂಡು ಹೆಬ್ಬೆಟ್ಟು ಗುರುತು ಮಾಡಿರುವುದಾಗಿ ನುಡಿದಿರುತ್ತಾರೆ. ಆದ್ದರಿಂದ ಸದರಿ ದೂರನ್ನು ನಿಪಿ- 1 ಎಂದು ಗುರುತಿಸಲಾಯಿತು.

ಸದರಿ ದಿನಾಂಕದಂದು ಪೊಲೀಸರು ಸಂಜೆ 4.00 ಗಂಟೆಗೆ ಘಟನೆಯಾದ ಸ್ಥಳಕ್ಕೆ ಕರೆದುಕೊಂಡು ಹೋಗಿ ಮಹಜರ್ ನಡೆಸಿರುತ್ತಾರೆ. ಪೊಲೀಸರಿಗೆ ಘಟನೆಯಾದ ಜಾಗವನ್ನು ನಾನೇ ತೋರಿಸಿರುತ್ತೇನೆ. ಘಟನೆಯಾದ ಸ್ಥಳದಲ್ಲಿ ಸ್ಥಳದ ಮಹಜರ್ ಮಾಡಲು ಚಾಸಾ- 2 ಮತ್ತು 3 ರವರ ಸಮಕ್ಷಮ ಮಹಜರ್ ಮಾಡಲಾಯಿತು. ಸ್ಥಳದಲ್ಲಿ ಮಹಜರ್ ಮಾಡಿದ ನಂತರ ನನ್ನ ಪೋಟೋವನ್ನು ತೆಗೆದುಕೊಂಡಿರುತ್ತಾರೆ. ಸಾಕ್ಷಿಗಳ ಹೆಬ್ಬೆಟ್ಟಿನ ಗುರುತು ಮತ್ತು ನನ್ನ ಹೆಬ್ಬೆಟ್ಟಿನ ಗುರುತನ್ನು ಮಹಜರ್ ಗೆ ತೆಗೆದುಕೊಂಡಿರುತ್ತಾರೆ. ಸಾಕ್ಷಿಗೆ ಮಹಜರ್ ತೋರಿಸಿ ಒಪ್ಪಿಕೊಂಡ ಕಾರಣ ಅದನ್ನು ನಿಪಿ- 2 ಎಂದು ಗುರುತಿಸಲಾಯಿತು. ಮತ್ತು ಮಹಜರ್ ನೊಂದಿಗೆ ಲಗತ್ತಿಸಿರುವ ಸಾಕ್ಷಿಯ ಛಾಯಾಚಿತ್ರವನ್ನು ನಿಪಿ- 3 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಎಪಿಪಿರವರು ಮುಂದುವರೆದ ಮುಖ್ಯ ವಿಚಾರಣೆಗೆ ಅನುಮತಿ ಕೋರಿದ್ದು , ಅನುಮತಿ ನೀಡಲಾಗಿದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದ ನ್ಯಾಯಾಲಯ ಯಳಂದೂರು.